# ವಾರ್ತಾ ವಿಶ್ಲೇಷಣೆ

## ನಾವೆಲ್ಲ ಒಂದೇ

**ಮಾನವ**ಕೋಟಿಯು ಹಲವು ಜನಾಂಗಗಳಾಗಿ ವಿಭಾಗಗೊಂಡಿರುವುದು ಸರಿಯಷ್ಟೆ. ಬಣ್ಣ, ಮೈಕಟ್ಟು ಮುಂತಾದ ಹಲವು ವೈವಿಧ್ಯತೆಗಳನ್ನು ನಾವು ಮಾನವರಲ್ಲಿ ಕಾಣುತ್ತೇವೆ. ಆಯಾ ಜನಾಂಗದವರು ತಮ್ಮ ಜನಾಂಗವೇ ಶ್ರೇಷ್ಠವೆಂದು ಹೆಮ್ಮೆ ಪಟ್ಟುಕೊಳ್ಳುವುದೂ ತಮ್ಮ ಜನಾಂಗದ ವೈಶಿಷ್ಟ್ಯವನ್ನು ಉಳಿಸಿಕೊಳ್ಳಲು ಹೋರಾಡುವುದೂ ಇದರಿಂದಾಗಿ ಅನೇಕ ಯುದ್ಧ ಹೋರಾಟಗಳು ನಡೆಯುವುದೂ ನಮಗೆಲ್ಲ ತಿಳಿದಿರುವ ವಿಷಯ. ಆದರೆ ಜನೆಟಿಕ್ ವಿಜ್ಞಾನಿಗಳು ಮಾನವರೆಲ್ಲರೂ ಮೂಲಭೂತವಾಗಿ ಒಂದೇ ಎಂದು ಪ್ರಯೋಗಾತ್ಮಕವಾಗಿ ತೋರಿಸಿಕೊಟ್ಟಿದ್ದಾರೆ. ಮಾನವರಲ್ಲಿರುವ ಜೀನುಗಳಲ್ಲಿ ಶೇಕಡ ೯೯.೯ ಎಲ್ಲರಲ್ಲೂ ಒಂದೇ ಸಮನಾಗಿರುತ್ತದಂತೆ. ವ್ಯತ್ಯಾಸವಿರುವುದು ಶೇಕಡ ೦.೧ರಲ್ಲಿ. ಈ ವ್ಯತ್ಯಾಸವೂ ಕೂಡ ಆಯಾಯ ಜನಾಂಗಗಳಿಗೆ ಸೀಮಿತವಾಗಿರುವುದಿಲ್ಲ—ಇದು ಪ್ರಪಂಚದಾದ್ಯಂತ ಹರಡಿಕೊಂಡಿದೆ. ಅಂದರೆ ವ್ಯಕ್ತಿವೈಶಿಷ್ಟ್ಯಕ್ಕೆ ಕಾರಣವಾದ ಜೀನಿನ ಲಕ್ಷಣಗಳು ಯಾವುದೊ ಒಂದು ಜನಾಂಗದಲ್ಲಿ ಅಥವಾ ಭೂಪ್ರದೇಶದಲ್ಲಿ ವಾಸಿಸುವವರಲ್ಲಿ ಮಾತ್ರ ಕಂಡುಬರದೆ ಅವು ಪ್ರಪಂಚದಾದ್ಯಂತ ಎಲ್ಲ ಕಡೆಯ ವಿಶಿಷ್ಟ ಜೀನ್‌ರಚನೆಗಳಲ್ಲಿ ಕಂಡುಬರುತ್ತದೆ. ಇದು ಇಡೀ ಮಾನವ ಕೋಟಿಯಲ್ಲಿರುವ ಪರಸ್ಪರ ಸಂಬಂಧವನ್ನು—**ವಸುಧೈವ ಕುಟುಂಬಕಮ್**— ಎಂಬುದನ್ನು ಸೂಚಿಸುತ್ತದೆ.

ಮಾನವಶಾಸ್ತ್ರದ (anthropology) ದೃಷ್ಟಿಯಿಂದಲೂ ನಾವೆಲ್ಲರೂ ಒಂದೇ ಮೂಲ ಬುಡಕಟ್ಟಿನ ಜನಾಂಗದಿಂದ ಬಂದವರು. ಆ ಮೂಲ ಜನಾಂಗ ಸುಮಾರು ೧೫೦,೦೦೦ ಮತ್ತು ೧೦೦,೦೦೦ ವರ್ಷಗಳ ನಡುವಿನ ಅವಧಿಯಲ್ಲಿ ಆಫ್ರಿಕದ ಒಂದು ಭಾಗದಲ್ಲಿ ವಾಸಿಸುತ್ತಿತ್ತೆಂದು ಪಳೆಯುಳಿಕೆಗಳ ಆಧಾರದ ಮೇಲೆ ಹೇಳಲಾಗಿದೆ. ಈ ಮೂಲ ಜನಾಂಗದವರೇ ಪ್ರಪಂಚದ ಬೇರೆ ಬೇರೆ ಕಡೆಗಳಿಗೆ ವಲಸೆ ಹೋಗಿ ಆಯಾಯ ಪ್ರದೇಶದ ಹವಾಗುಣ ಮತ್ತು ಇತರ ಸನ್ನಿವೇಶಗಳಿಗೆ ಅನುಗುಣವಾಗಿ ಬೇರೆ ಬೇರೆ ಜನಾಂಗಗಳನ್ನು ಸೃಷ್ಟಿಸಿದರು. ಈ ಅಂಶವೂ ಕೂಡ ನಾವೆಲ್ಲ ಒಂದೇ ಮನುಕುಲಸಂಜಾತರು ಎಂಬುದನ್ನು ಒತ್ತಿ ಹೇಳುತ್ತದೆ.

ಈ ಏಕತೆ ಕೇವಲ ಮಾನವಕುಲಕ್ಕೇ ಸೀಮಿತವಾದುದಲ್ಲ. ನಮ್ಮಲ್ಲಿರುವ ಹತ್ತನೆ ಒಂಬತ್ತು ಭಾಗ ಜೀನುಗಳು, ಇಲಿಗಳ ಜೀನುಗಳಿಗೆ ಸಮಾನವಾಗಿವೆಯಂತೆ. ಜೀನು ದೃಷ್ಟಿಯಿಂದ ನೋಡಿದರೆ ಅತ್ಯಂತ ಕ್ಷುದ್ರ ಬ್ಯಾಕ್ಟೀರಿಯಾಗಳೂ ನಮ್ಮ ಸೋದರ ಸಂಬಂಧಿಗಳು— ಎಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. 'ಒಂದು ನಾಯಿಗಿಂತ ನಾನು ಶ್ರೇಷ್ಠ ಎಂದು ಭಾವಿಸಿದರೆ ನಾನು ಅಜ್ಞಾನಿ' ಎಂಬ ಸ್ವಾಮಿ ವಿವೇಕಾನಂದರ ನುಡಿಯನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು. ನಾವೆಲ್ಲರೂ ಆಧ್ಯಾತ್ಮಿಕವಾಗಿ ಮಾತ್ರವಲ್ಲದೆ ಭೌತಿಕವಾಗಿಯೂ ಒಂದೇ ಎಂಬ ತಿಳಿವಳಿಕೆ ಪರಸ್ಪರ ವೈಮನಸ್ಯದಿಂದ ಪಾರಾಗಲು ಸಹಾಯಕವಾಗಬಹುದೇನೋ.

## ಔಷಧವೇ ವಿಷ

**ಔಷಧವೂ** ವಿಷವಾಗಬಲ್ಲದು. ಇದೇನೂ ಹೊಸ ಸುದ್ದಿಯಲ್ಲ. ನಿದ್ರಗುಳಿಗೆಯನ್ನು ಅಧಿಕ ಸಂಖ್ಯೆಯಲ್ಲಿ ಸೇವಿಸಿ ಅನೇಕರು ಮೃತರಾಗಿದ್ದಾರೆ. ಯಾವುದೊ ಖಾಯಿಲೆಗೆ ಯಾವುದೊ ಔಷಧಿಯನ್ನು ಸೇವಿಸಿ ಮೃತರಾದವರೂ ಇದ್ದಾರೆ. ಹಾಗೆಯೇ ಸರಿಯಾದ ಔಷಧಿಯನ್ನು ಸೇವಿಸಿಯೂ ಅದರ ದುಷ್ಪರಿಣಾಮದಿಂದ ಮೃತರಾದವರ ಸಂಖ್ಯೆಯೂ ಕಡಿಮೆಯೇನಲ್ಲ. **ಜರ್ನಲ್ ಆಫ್ ದಿ ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್** ಪ್ರಕಾರ ಅಮೆರಿಕದಲ್ಲಿ ಪ್ರತಿವರ್ಷ ಆಸ್ಪತ್ರೆಗಳಲ್ಲಿ ಅಧಿಕೃತವಾದ ಔಷಧಿಯ ಪ್ರತಿಕೂಲ ಪರಿಣಾಮದಿಂದ ಸಾಯುವ ರೋಗಿಗಳ ಸಂಖ್ಯೆ ೧೦೬,೦೦೦ ಮತ್ತು ನೋವಿಗೊಳಗಾಗುವವರ ಸಂಖ್ಯೆ ೨.೨ ಮಿಲಿಯನ್. ಬಹುಶಃ ಭಾರತದಲ್ಲಿ ಈ ಸಂಖ್ಯೆ ಇನ್ನೂ ಅಧಿಕವಿರಬೇಕು. ಒಂದೊಂದು ಖಾಯಿಲೆಗೂ ಅನೇಕ ಬಗೆಯ ಔಷಧಿಗಳಿವೆ, ಒಂದಕ್ಕೂ ಮತ್ತೊಂದಕ್ಕೂ ಶಕ್ತಿಯಲ್ಲಿ ಬಹಳ ವ್ಯತ್ಯಾಸವಿರುತ್ತದೆ. ವೈದ್ಯರೂ ಈ ವಿಷಯದಲ್ಲಿ ಗೊಂದಲಕ್ಕೊಳಗಾಗುತ್ತಾರೆ. ಔಷಧವನ್ನು ಸೂಚಿಸುವುದೇ ಒಂದು ಅಪಾಯದ ಕೆಲಸವೆಂದು ಅವರು ಹೇಳುತ್ತಾರೆ. ಔಷಧಿಯ ಅತಿ ಸೇವನೆ (*overdoses*)ಯಿಂದ ಅನೇಕರು ಸಾಯುತ್ತಾರೆ, ಮತ್ತೆ ಕೆಲವರು ಎರಡು ಅಥವಾ ಮೂರು ಬಗೆಯ ಔಷಧಿಗಳ ಸಂಮಿಶ್ರದಿಂದಾಗುವ ದುಷ್ಪರಿಣಾಮದಿಂದ ಸಾಯುತ್ತಾರೆ. ಒಟ್ಟಿನಲ್ಲಿ ಇದು ಏನನ್ನು ಸೂಚಿಸುತ್ತದೆಂದರೆ ನಾವು ಜೀವನವನ್ನು ಎಷ್ಟು ನಿಕೃಷ್ಟವಾಗಿ ಕಾಣುತ್ತೇವೆ ಎಂಬುದು. ನಮಗೆ ಉಪಯುಕ್ತವಾದ ನಿರ್ಜೀವ ವಸ್ತುಗಳನ್ನು ತುಂಬ ಜೋಪಾನವಾಗಿ ನೋಡಿಕೊಳ್ಳುತ್ತೇವೆ. ಆದರೆ ಯಾರಿಂದಾಗಿ ವಸ್ತುಗಳು ತಮ್ಮ ಉಪಯುಕ್ತತೆಯನ್ನು ಪಡೆಯುತ್ತವೊ ಆ ಜೀವಂತ ವ್ಯಕ್ತಿಗಳನ್ನೇ ಕಡೆಗಣಿಸುತ್ತೇವೆ. '**ಜೀವೇಮ ಶರದಃ ಶತಮ್**' ಎಂದು ನಮ್ಮ ವೈದಿಕ ಋಷಿಗಳು ಜೀವನವನ್ನು ಒಂದು ಅಮೂಲ್ಯ ವಸ್ತುವೆಂದು ಪರಿಗಣಿಸುತ್ತಿದ್ದರು. ಈಗ ಇದು ಇಷ್ಟೊಂದು ಅಗ್ಗವಾಗಿದೆ. '**ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ**' (ತನಗೆ ತಾನೇ ಶತ್ರು, ತನಗೆ ತಾನೇ ಬಂಧು)—ಎಂದು ವ್ಯಕ್ತಿಯನ್ನು ಕುರಿತು ಹೇಳಿರುವ ಗೀತೆಯ ಮಾತು ಇಡೀ **ಮಾನವಕೋಟಿಗೂ** ಅನ್ವಯಿಸುತ್ತದೆ.

'ಪ್ರಪಂಚದ ಎಲ್ಲ ಸಂಪತ್ತಿಗಿಂತಲೂ ಮನುಷ್ಯರು ಹೆಚ್ಚು ಮೌಲ್ಯವುಳ್ಳವರು'— ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಇಂತಹ ಅಮೂಲ್ಯ ಜೀವನವನ್ನು ಎಷ್ಟು ನಿಕೃಷ್ಟವಾಗಿ ಕಾಣುತ್ತೇವೆ!